ದಿನಾಂಕಃ **22/11/2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

---

ಸಿಡಬ್ಲ್ಯೂ 1 ರವರ ಮುಂದುವರಿದ ಮುಖ್ಯ ವಿಚಾರಣೆ

4. ಈ ದಿನ ನಾನು ಕೆಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನನ್ನ ಪರ ನಿಶಾನೆಗಳಾಗಿ ಗುರುತಿಸಬೇಕೆಂದು ಪ್ರಾರ್ಥಿಸುತ್ತೇನೆ.

ನನ್ನ ಅಣ್ಣ , ತಂದೆ ಮತ್ತು ತಾಯಿಯವರ ಮರಣ ಪ್ರಮಾಣ ಪತ್ರಗಳನ್ನು ಹಾಜರುಪಡಿಸುತ್ತಿದ್ದೇನೆ ಅವುಗಳನ್ನು ಕ್ರಮವಾಗಿ ನಿಸಿ-7 ರಿಂದ ನಿಸಿ-9 ಎಂದು, ಪುರಸಭೆ ಬಂಟ್ವಾಳ ರವರು ಮಾಹಿತಿ ಹಕ್ಕಿನಡಿ ನೀಡಿರುವ ಹಿಂಬರಹ ಮತ್ತು ಉದ್ದಿಮೆ ಪರವಾನಿಗೆ ಪತ್ರವನ್ನು ಒಟ್ಟಾಗಿ ನಿಸಿ-10 ಎಂದು, ರಾಘವೇಂದ್ರ ರಾವ್ ಎಂಡ್ ಕಂಪನಿಯವರಿಗೆ ನಾನು ಖುದ್ದಾಗಿ ನೀಡಿದ ಕಂಪನಿಯ Partner ಅಜಿತ್ ಪ್ರಸಾದ್ ಅದಕ್ಕೆ ಸಹಿ ಹಾಕಿರುತ್ತಾರೆ ನೋಟಿಸ್ ನಿಸಿ-11 ಎಂದು, ಸಾಕ್ಷಿಯ ಸಹಿಯನ್ನು ನಿಸಿ-11(ಎ) ಎಂದು, ಅಜಿತ್ ಪ್ರಸಾದ್ ರವರ ಸಹಿಯನ್ನು ನಿಸಿ-11(ಬಿ) ಎಂದು, ರಾಘವೇಂದ್ರ ರಾವ್ ಕಂಪನಿಯ Partner ಅಜಿತ್ ಪ್ರಸಾದ್ ರವರು ನನಗೆ ನೀಡಿದ ನೋಟಿಸ್ ನ್ನು ನಿಸಿ-12 ಎಂದು, ನೊಂದಾಯಿತ ಅಂಚೆ ಮುಖಾಂತರ ರಾಘವೇಂದ್ರ ರಾವ್ ಕಂಪನಿಗೆ ನೀಡಿಸಿದ ನೋಟಿಸಿನ ವಕೀಲರ ಕಚೇರಿ ಪ್ರತಿಯನ್ನು ನಿಸಿ13 ಎಂದು, ಅಂಚೆ ರಶೀದಿ ಮತ್ತು ಸ್ವೀಕೃತಿಯನ್ನು ನಿಸಿ-14 ಮತ್ತು ನಿಸಿ-15 ಎಂದು, ಸದ್ರಿ ನೋಟಿಸ್ ಗೆ ರಾಘವೇಂದ್ರ ರಾವ್ ಕಂಪನಿಯವರು ನೀಡಿದ ಪ್ರತ್ಯುತ್ತರವನ್ನು ನಿಸಿ-16 ಎಂದು, ಅಂಕೌಂಟ್ಸ್ ನ್ನು ನೀಡುವಂತೆ ಕೋರಿ ಅಜಿತ್ ಪ್ರಸಾದ್ ರವರಿಗೆ ಖುದ್ದಾಗಿ ಅರ್ಜಿ ನೀಡಿರುತ್ತೇನೆ ಸದ್ರಿ ಅರ್ಜಿಯನ್ನು ನಿಸಿ-17 ಎಂದು ಗುರುತಿಸಲಾಯಿತು.

5. Partnership ಪ್ರಕಾರ ನನಗೆ ಬರಬೇಕಾದ ಕಾನೂನು ಬದ್ಧ ಲಾಭಾಂಶವನ್ನು ಕೊಡದೆ ಆರೋಪಿತರು ನನಗೆ ಮೋಸ ವಂಚನೆ ಮಾಡಿರುತ್ತಾರೆ . ಆದುದರಿಂದ, ಆರೋಪಿತರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಈ ನ್ಯಾಯಾಲಯದಲ್ಲಿ ಪ್ರಾರ್ಥಿಸುತ್ತಿದ್ದೇನೆ.

ಮರು ವಿಚಾರಣೆ ಇಲ್ಲ .

ನನ್ನ ಉಕ್ತಲೇಖನಾ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಲಾಗಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ, ಬಂಟ್ವಾಳ